# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

ಸಂಖ್ಯೆ: ಬೆವಿಕಂ/ಬಿಸಿ-50/2501/2015-16 - cys-49

ನಿಗಮ ಕಾರ್ಯಾಲಯ,
ಕೃ.ರಾ. ವೃತ್ತ,
ಬೆಂಗಳೂರು-560001,
ದಿನಾಂಕ: 09 DEC 2015

## ಅಧಿಕೃತ ಜ್ಞಾಪನ

ವಿಷಯ: ಹೊರಸೇವೆ ಮೂಲಕ ಪಡೆದ ಮಾನವ ಸಂಪನ್ಮೂಲ ಸೇವೆಯನ್ನು ಮಿತಿಗೊಳಿಸುವ ಬಗ್ಗೆ.

ಉಲ್ಲೇಖ:
1. ಬೆವಿಕಂ/ಬಿಸಿ-50/2505/2015-16/ಸಿವೈಎಸ್-12, ದಿ:16.06.2015.
2. ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರ ಟಿಪ್ಪಣಿ ದಿ:01.10.2015 (ಪಿಎಲ್‌ಓ ನಂ: 5236).
3. ಬೆವಿಕಂ/ಬಿಸಿ-50/2501/2015-16/ಸಿವೈಎಸ್-44, ದಿ:20.10.2015.
4. ಮಾನ್ಯ ನಿರ್ದೇಶಕರು(ಹಣಕಾಸು)ರವರ ಅನುಮೋದನೆ ದಿ:05/12/2015.

******

ಉಲ್ಲೇಖಿತ (3)ರ ಪತ್ರದಲ್ಲಿ ವಿಭಾಗ ಮತ್ತು ಉಪ ವಿಭಾಗಗಳಿಗೆ ಹೊರಸೇವೆ ಮೂಲಕ ಪಡೆದಿರುವ ಪ್ರಾಜೆಕ್ಟ್ ಇಂಜಿನಿಯರ್, ಪ್ರಾಜೆಕ್ಟ್ ಎಕ್ಸಿಕ್ಯೂಟಿವ್, ಡಾಟಾ ಎಂಟ್ರಿ ಆಪರೇಟರ್‌ಗಳ ಸೇವೆಯನ್ನು ದಿನಾಂಕ:15.12.2015ಕ್ಕೆ ಅಂತ್ಯಗೊಳಿಸಲು ಆದೇಶಿಸಿದೆ. ಆದರೆ ಸಹಾಯಕ ಮತ್ತು ಕಿರಿಯ ಸಹಾಯಕ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆಯು ಜಾರಿಯಲ್ಲಿದ್ದು, ಸದರಿ ಸಿಬ್ಬಂದಿಗಳು ತರಬೇತಿ ಹೊಂದಿ ಕಾರ್ಯಕ್ಷೇತ್ರದಲ್ಲಿ ಕಾರ್ಯನಿರ್ವಹಿಸಲು ಸಮಯಾವಕಾಶ ಬೇಕಾಗಿರುವ ಹಿನ್ನೆಲೆಯಲ್ಲಿ ವಿಭಾಗ ಮತ್ತು ಉಪ ವಿಭಾಗಗಳಿಗೆ ಹೊರಸೇವೆ ಮೂಲಕ ಪಡೆದಿರುವ ಪ್ರಾಜೆಕ್ಟ್ ಇಂಜಿನಿಯರ್, ಪ್ರಾಜೆಕ್ಟ್ ಎಕ್ಸಿಕ್ಯೂಟಿವ್, ಡಾಟಾ ಎಂಟ್ರಿ ಆಪರೇಟರ್‌ಗಳ ಸೇವೆಯನ್ನು ದಿನಾಂಕ:29/02/2016ರವರೆಗೆ ಮುಂದುವರೆಸಲು ಈ ಮೂಲಕ ಅನುಮತಿ ನೀಡಿದೆ.

ಮುಂದುವರೆದಂತೆ, ಕಂಪನಿ, ವಲಯ ಹಾಗೂ ವೃತ್ತ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಾಜೆಕ್ಟ್ ಎಕ್ಸಿಕ್ಯೂಟಿವ್, ಡಾಟಾ ಎಂಟ್ರಿ ಆಪರೇಟರ್‌ಗಳ ಸೇವೆಯನ್ನು ಮುಂದುವರಿಸುವ ಅಥವಾ ಸೀಮಿತಗೊಳಿಸುವ ಬಗ್ಗೆ ಕಂಪನಿ ಕಾರ್ಯಾಲಯಕ್ಕೆ ವಿವರವಾದ ಮಾಹಿತಿಯೊಂದಿಗೆ ವರದಿ ಸಲ್ಲಿಸಲು ಸೂಚಿಸಿದೆ.

9/12/15

ಪ್ರಧಾನ ವ್ಯವಸ್ಥಾಪಕರು (ಆ&ಮಾಸಂ),
ಬೆವಿಕಂ, ಬೆಂಗಳೂರು.

**ಪ್ರತಿ:**

1. ಎಲ್ಲಾ ಮುಖ್ಯ ಪ್ರಧಾನ ವ್ಯವಸ್ಥಾಪಕರು, ಕಂಪನಿ ಕಾರ್ಯಾಲಯ, ಬೆವಿಕಂ.
2. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕಾ&ಪಾ ವಲಯ, ಬೆವಿಕಂ.
3. ಎಲ್ಲಾ ಪ್ರಧಾನ ವ್ಯವಸ್ಥಾಪಕರು, ಕಂಪನಿ ಕಾರ್ಯಾಲಯ, ಬೆವಿಕಂ.
4. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕಾ&ಪಾ ವೃತ್ತ, ಬೆವಿಕಂ.
5. ಎಲ್ಲಾ ಉಪ ಪ್ರಧಾನ ವ್ಯವಸ್ಥಾಪಕರು, ಕಂಪನಿ ಕಾರ್ಯಾಲಯ, ಬೆವಿಕಂ.
6. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ&ಪಾ ವಿಭಾಗ, ಬೆವಿಕಂ.
7. ಆಪ್ತ ಕಾರ್ಯದರ್ಶಿ, ವ್ಯವಸ್ಥಾಪಕ ನಿರ್ದೇಶಕರು / ನಿರ್ದೇಶಕರು (ಹಣಕಾಸು) / ನಿರ್ದೇಶಕರು (ತಾಂತ್ರಿಕ) / ಕಂಪನಿ ಕಾರ್ಯದರ್ಶಿ, ಬೆವಿಕಂ.
8. ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ, 2ನೇ ಮಹಡಿ, ಟಿಟಿಎಂಸಿ, "ಎ" ಬ್ಲಾಕ್, ಬಿಎಂಟಿಸಿ, ಶಾಂತಿನಗರ, ಕೆಹೆಚ್ ರಸ್ತೆ, ಬೆಂಗಳೂರು – 560 027.
9. ಉ.ಪ್ರ.ವ್ಯ.(ಸಿ)/ಮುಖ್ಯ ಕಡತ.

Letter reg Outsoursing manpower.docx